**ವಿಷಯ : ಗ್ರಾಮ ಪಂಚಾಯಿತಿಗಳ ಸಂಖ್ಯೆ ಹಾಗೂ ಅವುಗಳಿಗೆ ಕೊಟ್ಟ ಹಣ**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 430 (76)

ಶ್ರೀ. ಬಿ. ಎಸ್. ಯಡಿಯೂರಪ್ಪ. (ಶಿಕಾರಿಪುರ ):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು?

ಆ) ಈ ಗ್ರಾಮ ಪಂ.ಗಳಿಗೆ ಪ್ರತಿ ಪಂ. ಗೆ ಕಾನೂನು ಪ್ರಕಾರ ಒಂದು ಲಕ್ಷ ರೂ. ಮೊತ್ತ ಮತ್ತು 1993-94ರಲ್ಲಿ ನಿಡಲಾಗಿದೆಯೇ : ನೀಡಿದ್ದರೆ ಮೊತ್ತವೆಷ್ಟು?

ಇ) 1994-95ರಲ್ಲಿ ಕಾನೂನು ಪ್ರಕಾರ ಪ್ರತಿ ಪಂಚಾಯಿತಿಗಳಿಗೆ ಕೊಡಬೇಕಾದ ಒಂದು ಲಕ್ಷ ರೂ. ಮೊತ್ತ ಕೊಡಲಾಗಿದೆಯೇ, ಕೊಟ್ಟಿದ್ದಲ್ಲಿ ಜೂನ್ 1994 ರ ಕೊನೆಗೆ ಕೊಟ್ಟಿರುವ ಮೊತ್ತವೆಷ್ಟು ?

ಶ್ರೀ. ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಯವರು ) :-

| | |
|---|---|
| ಅ) ಗ್ರಾಮ ಪಂಚಾಯತ್ | 5640 |
| ಮಧ್ಯಂತರ ಮಂ. ಪಂಚಾಯತ್ | 33 |
| | 5673 |

ಆ) ಎಲ್ಲಾ ಗ್ರಾ. ಪಂ.ಗಳಿಗೆ ಮಾರ್ಚಿ 1994ರವರೆಗೆ ಒಟ್ಟು ರೂ. 2345.24 ಲಕ್ಷ ತಲಾನುದಾನದ ರೂಪದಲ್ಲಿ ಬಿಡುಗಡೆ ಮಾಡಲಾಗಿದೆ. 1993ನೇ ಕರ್ನಾಟಕ ಪಂ. ರಾಜ್ ಅಧಿನಿಯಮದ ಪ್ರಕಾರ ಪ್ರತಿ ಗ್ರಾಮ ಪಂಚಾಯಿತಿಗೆ ರೂ. 1.00 ಲಕ್ಷ ವಾರ್ಷಿಕ ಅನುದಾನವನ್ನು 1994-95ನೇ ಸಾಲಿನಿಂದ ಬಿಡುಗಡೆ ಮಾಡಲಾಗುತ್ತಿದೆ.

ಇ) 1994-95ರ ಸಾಲಿಗೆ ಗ್ರಾ. ಪಂ.ಗಳಿಗೆ ಒಟ್ಟು ರೂ. 5673.00 ಲಕ್ಷ ಅಯವ್ಯಯದಲ್ಲಿ ಒದಗಿಸಿದ್ದು ಇದನ್ನು ವಾರ್ಷಿಕವಾಗಿ 4 ಕಂತುಗಳಲ್ಲಿ ಗ್ರಾ. ಪಂ.ಗಳಿಗೆ ಬಿಡುಗಡೆ ಮಾಡಲು ನಿರ್ಧರಿಸಲಾಗಿದ್ದು ಜೂನ್ 1994 ರ ಕೊನೆಯವರೆಗೆ 1418.25 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**ವಿಷಯ : ನಿಗದಿತ ಹಾಗೂ ವಾಸ್ತವಿಕ ಆಯವ್ಯಯದ ಬಗ್ಗೆ**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 432 (78)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?